**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 582/ 2018**

**ಚಾಸಾ ಃ- 08 / ಪ್ರಾಸಾ ಃ- 06**

| | |
|---|---|
| ಹೆಸರು | ಬಿ ಎಸ್ ಕೃಷ್ಣೇಗೌಡ |
| ತಂದೆ ಹೆಸರು | ಸಿದ್ದಯ್ಯ |
| ವಯಸ್ಸು | 57 |
| ಉದ್ಯೋಗ | ಬಿ ಎಂ ಟಿಸಿ ಡಿಪೋ ಮಾನೇಜರ್ , |
| ವಿಳಾಸ | ಬೆಂಗಳೂರು |

**ದಿನಾಂಕಃ 24.07.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಮಾರ್ಚ್ 2016 ರಿಂದ ಅಕ್ಟೋಬರ್ 2018 ರವರೆಗೆ ರಾಮನಗರ ಕೆಎಸ್ ಆರ್ ಟಿ ಸಿ ಡಿಪೋದಲ್ಲಿ ಮ್ಯಾನೇಜರ್ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 11.10.2017 ರಂದು ಮಾಗಡಿ ಪೋಲಿಸ್ ಠಾಣೆಯವರು ಚಾಸಾ 1 ಮತ್ತು 2 ರವರ ಕರ್ತವ್ಯ ಧಡೀಕರಣ ಪತ್ರವನ್ನು ನೀಡುವಂತೆ ಕೇಳಿದ್ದು ಅದರಂತೆ 12.10.2017 ರಂದು ಮಾಗಡಿ ಪೋಲಿಸ್ ಠಾಣೆಯವರಿಗೆ ಚಾಸಾ- 1 ಮತ್ತು 2 ರವರ ಕರ್ತವ ಧೃಡೀಕರಣ ಪತ್ರವನ್ನು ನೀಡಿರುತ್ತೇನೆ. ಈಗ ಸಾಕ್ಷಿಗೆ ದಿನಾಂಕ 12.10.2017ರಂದು ತಾವು ನೀಡಿದ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ವರಧಿಯನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು** ಃ- **ಶ್ರೀ.** ಜಿ ಆರ್ ಎಸ್ ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಪೋಲಿಸರು ಚಾಸಾ 1 ಮತ್ತು 2 ರವರ ಕರ್ತವ್ಯ ಧೃಡೀಕರಣ ಪತ್ರವನ್ನು ನೀಡುವಂತೆ ಮೌಖಿಕವಾಗಿ ಕೇಳಿದ್ದರ ಅಥವಾ ಪತ್ರ

ಮುಖಾಂತರ ಕೇಳಿದ್ದರ ಎಂದರೆ ಸಾಕ್ಷಿ ಮೌಖಿಕವಾಗಿ ಎಂದು ನುಡಿಯುತ್ತಾರೆ. ನಿಪಿ 5 ರಲ್ಲಿ ಪೋಲಿಸರು ಮೌಖಿಕವಾಗಿ ಧೃಡೀಕರಣ ಪತ್ರ ನೀಡುವಂತೆ ಕೇಳಿದ್ದರು ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1 ಮತ್ತು 2 ರವರು ಸದರಿ ದಿನದಂದು ಕರ್ತವ್ಯದಲ್ಲಿ ಇದ್ದರು ಎಂದು ತೋರಿಸಲು ನಿಪಿ-5 ಅನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ದಾಖಲೆಗಳು ನ್ಯಾಯಾಲಯದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ 1 ಮತ್ತು 2 ರವರು ನಿಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಪ್ರಮಾಣಪತ್ರವನ್ನು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**